ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರು ಮನೆಯಲ್ಲಿಯೋ, ಅಥವಾ ಬೇರೆ ಎಲ್ಲಿಯೋ ಇದ್ದಾರೆ ಎಂದು ಲಕ್ಷ್ಮೀಸಾಗರ್‌ರವರಂ ಹೇಳಿದ್ದಾರೆ...

ಅಧ್ಯಕ್ಷರು.—ಮುಂಖ್ಯವಾದ ವಿಷಯಂಗಳ ಮೇಲೆ, ಮಾನ್ಯ ಬಸವಲಿಂಗಪ್ಪನವರು, ಕೆ. ಎಚ್. ಶ್ರೀನಿವಾಸ್‌ರವರು ಮಂತಾಗಿ ಮಾತನಾಡಲಿದ್ದಾರೆ. ಆದುದರಿಂದ ನಾವು ಈಗ ಈ ವಿಚಾರ ಬಿಟ್ಟು ಮುಂದೆ ಹೋಗೋಣ...

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಬರಲಾಗದಿದ್ದುದ್ದಕ್ಕೆ ಏನು ತೊಂದರೆ ಎಂದು ಹೇಳಬೇಕಂ.

ಅಧ್ಯಕ್ಷರು.— ಬಂಗಾರಪ್ಪನವರೇ...

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮಂತ್ರಿಮಂಡಲದಲ್ಲಿ ಈಗ ಮೋಹಿನಿ ಭಸ್ಮಾಸುರ ನೃತ್ಯ ಪ್ರಾರಂಭವಾಗಿದೆ. ಯಾರು ಈ ನೃತ್ಯಕ್ಕೆ ಕಾರಣರಾದರು ಅವರೆನೇ ಸುಟ್ಟು ಹಾಕುತ್ತದೆ.

ಅಧ್ಯಕ್ಷರು.—ಮಾನ್ಯ ಬಿ. ಆರ್. ನೀಲಕಂಠಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಿರಿ.

ಚಿಕ್ಕಮಗಳೂರು ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳು

೮೭೩. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರಥಮ ದರ್ಜೆ ಕಾಲೇಜುಗಳಿವೆ?

ಆ) ಇವುಗಳಲ್ಲಿ ಎಷ್ಟು ವಿಜ್ಞಾನ ಕಾಲೇಜುಗಳಿವೆ?

ಇ) ತರೀಕೆರೆ ಮತ್ತು ಅಜ್ಜಂಪುರದಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲು ಸರ್ಕಾರ ದವರು ಉದ್ದೇಶಿಸಿದ್ದಾರೆಯೆ?

ಈ) ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು). —

ಅ) ಈ ಜಿಲ್ಲೆಯಲ್ಲಿ ಮೂರು ಪ್ರಥಮ ದರ್ಜೆ ಕಾಲೇಜುಗಳು ಸ್ಥಾಪಿಸಲ್ಪಟ್ಟಿವೆ.

೧) ಕೊಪ್ಪ ೨) ಮೂಡಿಗೆರೆ ೩) ನರಸಿಂಹರಾಜಪುರ

ಆ) ಯಾವುದು ಇಲ್ಲ.

ಇ) ಹೌದು.

ಈ) ೧೯೮೮-೮೯ರ ಸಾಲಿನಲ್ಲಿ ಇಲ್ಲಿ ಪ್ರಥಮ ದರ್ಜೆ ಕಾಲೇಜು ತೆರೆಯುವ ಬಗ್ಗೆ ವಿಶ್ವವಿದ್ಯಾ ನಿಲಯ ಸಂಯೋಜನೆಗೆ ಅರ್ಜಿ ಸಲ್ಲಿಸಲು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಬರೆಯಲಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿಜ್ಞಾನ ಕಾಲೇಜುಗಳು ಇಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸರಕಾರಿ ಅಧಿಕಾರಿಗಳು ಎಷ್ಟು ತಪ್ಪು ಉತ್ತರವನ್ನು ಮಂತ್ರಿಯವರಿಗೆ ಒದಗಿಸುತ್ತಿದ್ದಾರೆ ಎನ್ನುವುದು ಇದರಿಂದ ತಿಳಿದು ಬರುತ್ತದೆ. ಏಕೆಂದರೆ ಚಿಕ್ಕಮಗಳೂರಿನಲ್ಲಿ ಒಂದು ವಿಜ್ಞಾನ ಕಾಲೇಜು ಇದ್ದರೂ ಇಲ್ಲ ಎಂದು ಉತ್ತರ ದಲ್ಲಿ ಹೇಳಿದ್ದಾರೆ.

ತರೀಕೆರೆ ಮತ್ತು ಅಜ್ಜಂಪುರದಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತಾ ಇದ್ದೇವೆ, ಅವುಗಳಿಗೆ ಇಲ್ಲಿಯ ವರೆಗೆ ಸರಕಾರದವರು ಆದೇಶವನ್ನು ಕೊಟ್ಟಿಲ್ಲ, ಈ ಮುಂದಿನ ವರ್ಷವಾದರೂ ಕೊಡುತ್ತಾರೋ, ಇಲ್ಲವೋ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಜೀವರಾಜ ಆಳ್ವ.—ಅಧ್ಯಕ್ಷರೆ, ನಾನು ಕೊಟ್ಟ ಉತ್ತರವು ತಪ್ಪಾಗಿದ್ದರೆ ದಯವಾಡಿ ಕ್ಷಮಿಸಬೇಕು. ಅಧಿಕಾರಿಗಳಿಂದ ಈ ಬಗ್ಗೆ ಸೂಕ್ತ ವಿವರಣೆಯನ್ನು ಕೇಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಸಚಿವರು ಚಿಕ್ಕಮಗಳೂರಲ್ಲಿ ವಿಜ್ಞಾನ ಕಾಲೇಜು ಇಲ್ಲ ಎಂದು ಹೇಳಿದ್ದಾರೆ. ಹಾಗೇನಾದರೂ ಆ ಕಾಲೇಜನ್ನು ವಾಪಸ್ಸು ಪಡೆದಿದ್ದಾರೆಯೆ?

ಶ್ರೀ ಜೀವರಾಜ ಆಳ್ವ.—ಹಾಗಿ ವಾಪಸ್ಸು ಪಡೆದುಕೊಂಡಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಚಿಕ್ಕಮಗಳೂರಿನಲ್ಲಿ ವಿಜ್ಞಾನ ಕಾಲೇಜು ಇದೆ.

ಶ್ರೀ ಜೀವರಾಜ ಆಳ್ವ.—ಇದ್ದರೆ ಅದನ್ನು ಖಂಡಿತಾ ವಾಪಸ್ಸು ತೆಗೆದುಕೊಳ್ಳುವುದಿಲ್ಲ.

ಸರ್ಕಾರದ ನೂತನ ಶಿಕ್ಷಣ ನೀತಿ

೧೧೦೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು?

ಆ) ಇದರ ಜಾರಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ನೂತನ ಶಿಕ್ಷಣ ಜಾರಿಗಾಗಿ ಮೀಸಲಾಗಿಟ್ಟಿರುವ ಹಣ ಮತ್ತು ಖರ್ಚಾದ ಹಣವೆಷ್ಟು?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ತತ್ವಶಃ ಒಪ್ಪಿಕೊಂಡಿದೆ.

ಆ) ಇದರಡಿಯಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ವೃತ್ತಿ ಶಿಕ್ಷಣ, ವಿಜ್ಞಾನ ಶಿಕ್ಷಣ ಇತ್ಯಾದಿ ಬಗ್ಗೆ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಕೇಂದ್ರ ಸರ್ಕಾರವು ನೀಡುವ ಹಣ ಸಹಾಯಕ್ಕಾಗಿ ಪ್ರಸ್ತಾವನೆ ಕಳುಹಿಸಲಾಗಿದೆ.

ಇ) ಕೇಂದ್ರ ಧನ ಸಹಾಯ ನಿರೀಕ್ಷಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ಕೇಂದ್ರ ಸರಕಾರದ ಹೊಸ ಶಿಕ್ಷಣ ನೀತಿಯನ್ನು ತತ್ವಶಃ ಒಪ್ಪಿಕೊಂಡಿದೆ ಎಂದು ಹೇಳಿದ್ದಾರೆ. ಈ ಹೊಸ ನೀತಿಯಲ್ಲಿ ಯಾವ ಯಾವ ತತ್ವಗಳು ಅಡಕವಾಗಿವೆ ? ಅದರಲ್ಲಿ ನೀವು ಒಪ್ಪಿಕೊಂಡಿರುವವಗಳು ಯಾವುವು ? ಒಪ್ಪಿಕೊಳ್ಳದಿರುವುದು ಯಾವುವು ? ಇದರಲ್ಲಿ ಫಾರ್ಮಲ್ ಎಜುಕೇಶನ್‌ನನ್ನು ಸಂಪೂರ್ಣವಾಗಿ ಬಿಟ್ಟು, ಟಿ. ವಿ.ಯಲ್ಲಿ ನೋಡಿ ಎಜುಕೇಶನ್ ಪಡೆಯಿರಿ ಎಂಬ ನೀತಿ ಏನಾದರೂ ಇದೆಯೋ, ಅಥವಾ ನವೋದಯ ಸ್ಕೂಲ್ಸ್ ಪ್ರಕಾರ ಜಿಲ್ಲೆಗೆ ೬೦ ಜನರಿಗೆ ಮಾತ್ರ ಕೊಡುವ ಒಂದು ರೀತಿಯನ್ನು ಅಥವಾ ತತ್ವವನ್ನು ಇಟ್ಟುಕೊಂಡಿದ್ದಾರೋ ಎಂದು ಹೇಳಬೇಕು. ಆ ನೀತಿಯಲ್ಲಿ ನೀವು ಒಪ್ಪಿಕೊಂಡಿರುವ ಮತ್ತು ಬಿಟ್ಟಿರುವ ತತ್ವಗಳನ್ನು ಹೇಳಬೇಕು.

SRI B. SOMASEKHAR.—In principle we have agreed to implement the New Education Policy. ನಾವು ಸುಮಾರು ಏಳು ಯೋಜನೆಗಳ ಪ್ರಸ್ತಾವನೆಯನ್ನು ಕೇಂದ್ರಸರಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅದರ ಮಂಜೂರಾತಿಗಾಗಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇವೊತ್ತಿನ ದಿನಪತ್ರಿಕೆಯಲ್ಲಿ ಆಟಾನಮಿ ಏನಿದೆ ಅದರ ಬಗ್ಗೆ ನೀವು ಏನು ಹೇಳುತ್ತೀರಿ ? ಹೀಗೆ ವಿದ್ಯಾರ್ಥಿಗಳನ್ನು ಮತ್ತು ಉಪಾಧ್ಯಾಯರನ್ನು ನೀವೆ ಶೋಷಣೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟ ಹಾಗೆ ಆಗುವುದಿಲ್ಲವೆ ? ಇಂಥ ತತ್ವಗಳ ಬಗ್ಗೆ ನೀವು ಏನು ಹೇಳುತ್ತೀರಿ ?

ಫಾರ್ಮಲ್ ಎಜುಕೇಷನ್ ಬೇಡ ಎಂದು ಹೇಳುತ್ತೀರಾ ? ಇನ್ ಫಾರ್ಮಲ್ ಎಜುಕೇಷನ್‌ನ್ನು ತಾವು ಒಪ್ಪಿಕೊಳ್ಳುತ್ತೀರಾ ? ಇದು ನ್ಯೂ ಎಜುಕೇಷನ್ ಪಾಲಿಸಿ. ಇದಕ್ಕೆ ತಾವು ಏನು ಹೇಳುತ್ತೀರಿ? ಈ ತತ್ವವನ್ನು ಏನು ಒಪ್ಪಿಕೊಂಡಿದ್ದೀರಿ. ಯಾವ್ಯಾವುದಕ್ಕೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ. ಆಟಾನಮಿ, ಬ್ಲಾಕ್‌ಬೋರ್ಡ್, ನವೋದಯ ಎಂದು ಈ ಮೂರು ಕಾನ್‌ಸೆಪ್ಟ್‌ಗಳು ಇದೆಯಲ್ಲಾ ಇದರಲ್ಲಿ ಯಾವ್ಯಾವುದಕ್ಕೆ ಎಷ್ಟು ಎಷ್ಟು ಹಣವನ್ನು ಕೊಡಿ ಎಂದು ಕೇಳಿದ್ದೀರಿ.